

ದುಡಿದು ತಿನ್ನುವ ಅವಳ ಸ್ವಾಭಿಮಾನಕ್ಕೆ ಧಕ್ಕೆಯಾದೀತು ಎಂದು ತಡಕೊಂಡೆ. ಅವಳ ತಾರಸ್ವರ ಬಾಜೂ ಗಲ್ಲಿಯನ್ನು ಹೊಕ್ಕು ಕ್ರಮೇಣ ಕ್ಷೀಣಗೊಂಡು ಕೇಳದಾಯಿತು.

ಬೀದಿಯಲ್ಲಿ ಹಾಡಿನದೋ ವಾದ್ಯದ್ದೋ ಸದ್ದಾದರೆ, ಕೂಡಲೇ ಹೊರಗೆ ಹೋಗಿ ನಿಲ್ಲುವ ಹವ್ಯಾಸ ಎಲ್ಲ ಮಕ್ಕಳಿಗಿರುವಂತೆ ನನಗೂ ಇತ್ತು. ಬೀದಿ ವ್ಯಾಪಾರಿಗಳ ಕೂಗು ನಮ್ಮನ್ನೇನೂ ಸೆಳೆಯುತ್ತಿರಲಿಲ್ಲ. ಆದರೆ ಮನೆಯ ಗಲ್ಲಿಯಲ್ಲಿ ನಿಂತು, 'ಸೊಪ್ಪೂ...' ಎಂದು ಕೂಗಿ ಆಕೆ ಹಿಂತಿರುಗಿ ನೋಡುವುದರೊಳಗೆ ಅಡಗಿಕೊಳ್ಳುತಿದ್ದೆವು. ಆಯಾ ದಿನದ ಊಟವನ್ನು ಅಂದೇ ಗಳಿಸುವ ಜನರಿದ್ದ ನಮ್ಮ ಬೀದಿಗೆ, ಸೀಮೆಯ ಸಮಸ್ತ ಬೀದಿಕಲಾವಿದರು ಬರುತ್ತಿದ್ದರು. ಕೆಲವರು ಆಗಮಿಸುವ ದಿನ–ಹೊತ್ತು ನಿಶ್ಚಿತವಾಗಿರುತ್ತಿತ್ತು. ಗುರುವಾರ ಬಂತೆಂದರೆ, ಧಫ್ ಬಾರಿಸುತ್ತ ಸಂತರ ಮೇಲೆ ಕೀರ್ತನೆ ಹಾಡುತ್ತ ಬಾಬಾಬುಡನಗಿರಿಯ ಫಕೀರರು; ಶನಿಶನಿವಾರ ಗರುಡಗಂಬ ಹಿಡಿದು ಜಾಗಟೆ ಬಾರಿಸುತ್ತ ಶಂಖನಾದಿಸುವ ದಾಸಪ್ಪಗಳು; ಬೆಳಗಿನ ಹೊತ್ತು, ಕಿನ್ನರಿ ನುಡಿಸುತ್ತ ಗೆಜ್ಜೆಕಟ್ಟಿಕೊಂಡು ಕುಣಿವ ಜೋಗಿಗಳು; ಬಿಸಿಲೇರಿದ ಮೇಲೆ 'ಹಾವು–ಚೇಳು, ಜುಂಜಪ್ಪನ ಕಾಣಿಕೆ' ಎಂದು ಹೆಗ್ಗೊಳಲನೂದುವ ಗಣೆಯವರು; ಯಾವಾಗಲಾದರೆಮ್ಮೆ ಕೊಂಬಿಗೆ ವರ್ಣರಂಜಿತ ಬಟ್ಟೆಗಳನ್ನು ಕಟ್ಟಿ, ಬೆನ್ನಮೇಲೆ ಕುಸುರಿಜೂಲನ್ನು ಹಾಕಿ ಶಹನಾಯಿ ನುಡಿಸುವ ಕೋಲೆತ್ತಿನವರು; ಬಣ್ಣಬಣ್ಣದ ಶಾಲುಗಳನ್ನೂ ಕರವಸ್ತ್ರಗಳನ್ನು ಇಳಿಬಿಟ್ಟುಕೊಂಡು ಶೃಂಗರಿಸಿದ ಬಟ್ಟೆಯಂಗಡಿಯಂತಿದ್ದ ಬುಡಬುಡಕಿಯವರು – ಫ್ಯಾಶನ್‌ಷೋನಲ್ಲಿ ಮಾರ್ಜಾಲ ನಡಿಗೆ ಮಾಡುವ ಮಾಡೆಲ್ಲುಗಳ ತರಹ, ಬೀದಿಯನ್ನು ರಂಗಭೂಮಿ ಮಾಡುತ್ತಿದ್ದರು. ಊರುಮಾರಿಯವನಂತೂ ದೇವೀ ಪೆಟ್ಟಿಗೆಯನ್ನು ಬೀದಿ ತುದಿಗೆ ಪ್ರತಿಷ್ಠಾಪಿಸಿ, ಚಾಟಿಯಿಂದ ಬಡಿದುಕೊಳ್ಳುತ್ತ ತಟ್ಟೆಯಲ್ಲಿ ನೆತ್ತರು ಸುರಿವಂತೆ ಕೈಕೊಯ್ದುಕೊಂಡು ಬಾಯಲ್ಲಿ ಬಾಕನ್ನು ಕಚ್ಚಿ ರುದ್ರನಾಟಕವನ್ನೇ ಕಟ್ಟುತ್ತಿದ್ದನು. ಅವನ ಹೆಂಡತಿ ಉರುಮೆಯ ಒಂದು ಬದಿಗೆ ಕೋಲಿನಿಂದ ಬಾರಿಸುತ್ತ, ಇನ್ನೊಂದು ಬದಿಯನ್ನು ಗರ್‌ಗರಕೆಂದು ಉಜ್ಜುತ್ತ, ಅರ್ಥವಿಲ್ಲದ ಸ್ವರ ಹೊರಡಿಸುತ್ತಿದ್ದಳು. ಬೋರು ಹಿಡಿಸುವ ಸಮಾಜಶಾಸ್ತ್ರದ ಮೇಷ್ಟರಿಗೆ ನಾವು ಉರುಮೆ ಎಂದು ಹೆಸರಿಟ್ಟಿದ್ದೆವು. ಉರುಮೆಯ ಗಲಾಟೆಗೆ ಮಲಗಿದ್ದ ಕೂಸುಗಳು ಎದ್ದಳುತ್ತಿದ್ದವು. ಕೊಟ್ಟಿಗೆ ದನ ಬೆದರುತ್ತಿದ್ದವು; ನಾಯಿಗಳೆದ್ದು ಬೊಂಕರಿಸುತಿದ್ದವು; ಮಧ್ಯಾಹ್ನದ ನಿದ್ದೆ ತೆಗೆಯುತ್ತಿದ್ದ ಅಪ್ಪ 'ಏನಾರ ಕೊಟ್ಟು ಕಳಿಸರೊ ಅತ್ಲಾಗೆ' ಎಂದು ಸಿಡುಕುತ್ತಿದ್ದನು. ನಾವು ಬೀದಿಯ ಸದ್ದು ಕೇಳಿದರೆ ಒಳಗೆ ಕೂತದ್ದೇ ಇಲ್ಲ. ತುಸುದೂರ ಅವರನ್ನು ಹಿಂಬಾಲಿಸಿ ಹೋಗಿ ಬೀಳ್ಕೊಟ್ಟು ಬರುತ್ತಿದ್ದುದೂ ಉಂಟು.

ಆದರೆ ಸಣ್ಣ ಪಟ್ಟಣದಲ್ಲಿದ್ದಾಗ ದಿನವೂ ಆಲಿಸುತ್ತಿದ್ದ ಈ ಬೀದಿ ಕಲೆಗಳು, ನಗರವಾಸಕ್ಕೆ ಬಂದ ಬಳಿಕ ಕಾಣದಾದವು. ಅಲ್ಲಿ ಕೇಳುತ್ತಿದ್ದುದು ವ್ಯಾಪಾರಿಗಳ ಬೀದಿಕೂಗು ಮಾತ್ರ. ಟೈಲರು, ವಾಲಗದವರು, ಲೈನ್‌ಮನ್ನುಗಳು, ಟೀಚರು ವಾಸವಾಗಿದ್ದ ನಮ್ಮ ಬಡಾವಣೆಯಲ್ಲಿ, ಬೀದಿಮಾರುಗರು ಬಾರದೆ ಒಲೆ ಹೊತ್ತುತ್ತಿರಲಿಲ್ಲ. ಪ್ರಾತಃಕಾಲದ ಮೌನವನ್ನು ಮೊದಲಿಗೆ ಕದಡುತ್ತಿದ್ದವನು 'ಹೂವುಹುವ್ವೋ' ಎನ್ನುತ್ತಿದ್ದ ಹೂವಾಡಿಗನು. ಅವನು ಬೀದಿಯಲ್ಲಿ ಸಿಗುವ ಜನರಿಗೆ ಕಂಕಣ ಕಟ್ಟುವವನಂತೆ ಹರಿದಾಡುತ್ತಿದ್ದನು. ಇವನ ನಂತರ ಎರಡು ದೊಡ್ಡಕ್ಯಾನುಗಳನ್ನು ಸೈಕಲ್ಲಿಗಿಟ್ಟುಕೊಂಡು 'ಹಾಲೋ' ಎಂದು ಬರುತ್ತಿದ್ದ ಕವಾಡಿಗರವನು. ಬಳಿಕ ಬಜಾರಿನ ಒಂದೊಂದೇ ಅಂಗಡಿ ಕಾಲು ಮೂಡಿಸಿಕೊಂಡು ಬಂದಂತೆ ಮಂಡಕ್ಕಿಯವರು, ಸೊಪ್ಪಿನವರು, ತರಕಾರಿಯವರು, ಮೀನಿನವರು. ಪ್ರತಿಯೊಬ್ಬರ ಸ್ವರವೂ ವಿಭಿನ್ನ. ಗಂಡಸರು ಘಟ್ಟಿಸಿ ಸರಕಿನ ಹೆಸರು ಕೂಗಿದರೆ ಮಹಿಳೆಯರು ರಾಗವೆಳೆಯುತ್ತಿದ್ದರು. ಎಳೆನೀರಿನವನ 'ಎಳ್ಳೀರೆಳ್ಳೀರೆಳ್ಳೀರ್' ಸ್ವರ ಗಾಜಿನ ಮೇಲೆ ಮೊಳೆಯಿಂದ ಗೀಚಿದಂತೆ ಕೇಳುತ್ತಿತ್ತು. ನೀರುಳ್ಳಿಯವನದಂತೂ ಜಗಳವಾಡಿದಂತೆ ಇರುತ್ತಿತ್ತು. ಒಂದು ಸಲ ಅವನಿಗೆ 'ನಿನ್ನ ಗಂಟಲ ಗತಿ ಏನಗಬೇಕಪ್ಪಾ' ಎಂದು ಕೇಳಿದೆ. 'ಇಷ್ಟು ಅರಚಿದರೂ ಹೊರಗ ಬರವಲ್ಲರು. ಏನು ಮಾಡಬೇಕರಿ ಹೇಳ್ರಿ?' ಎಂದು ಪ್ರತಿಪ್ರಶ್ನೆ ಹಾಕಿದನು. ವ್ಯಾಪಾರಿಕರೆ ಬಂದಾಗ ಮನೆಯೊಳಗಿನ ಜನ ಯಾವ್ಯಾವ ಕೆಲಸದಲ್ಲಿತ್ತಾರೋ ಯಾರು ಬಲ್ಲರು? ಹಾಲು ಹೂವು ಮಂಡಕ್ಕಿಯವರು ಸರದಿ ಬಂದಾಗ ಬಹುತೇಕರು ಮಲಗಿರುತ್ತಾರೆ. ಅದರಲ್ಲೂ ನವದಂಪತಿಗಳಿಗೆ ಪ್ರಾತಃಕರೆಗಳು ಚೂರೂ ಇಷ್ಟವಿಲ್ಲ. ಕೃಷ್ಣ ಬೀದಿಯಲ್ಲಿ ಕೊಳಲು ನುಡಿಸುತ್ತ ಹೋದರೆ, ಗೋಪಿಕೆಯರು ಗಂಡನ ತೆಕ್ಕೆಬಿಡಿಸಿಕೊಂಡು ಹೊರಬರುತ್ತಿದ್ದರಂತೆ. ಆದರೆ ಬೀದಿವ್ಯಾಪಾರಿಗಳದ್ದು ದೂರತೀರಕೆ ಕರೆಯುವ ಮೋಹನ ಮುರಳಿಯ ಕರೆಗಳಲ್ಲ; ಬದಲಿಗೆ ದೈನಿಕದ ಗಾಣಕ್ಕೆ ಹೂಡಲು ಎಬ್ಬಿಸುವ ಎಚ್ಚರಿಕೆಯ ಗಂಟೆಗಳು; ಕಲ್ಪನೆಯ ಸುಷುಪ್ತಿಯಿಂದ ವಾಸ್ತವದ ಕಠೋರಕ್ಕೆ ಎಳೆದುತರುವ ಪಾಶಗಳು. ಬೀದಿಕರೆಗಳು ಪ್ರೇಮ ಕುದುರಿಸಿದ ನಿದರ್ಶನಗಳು ಇಲ್ಲದಿಲ್ಲ. ನಮ್ಮ ಬೀದಿಯಲ್ಲಿದ್ದ ಒಬ್ಬ ನಿವೃತ್ತ ಪೋಲಿಸರು, ಮಹಿಳಾ ವ್ಯಾಪಾರಿಗಳು ಬಂದಾಗ ತಾವೇ ಕೊಳ್ಳಲು ಮುಂದಾಗಿ, ಹೆಂಡತಿ ಕೈಲಿ ಸಮಾ ಬೈಸಿಕೊಳ್ಳುತ್ತಿದ್ದರು.

ನನಗೆ ನೆನಪಿರುವಂತೆ, ಬೀದಿಕರೆಗಳಲ್ಲೆಲ್ಲ ಮೀನುಗಾರನದು ಅತಿಮಧುರವಾಗಿತ್ತು. ಹಾಗೆನಿಸಲು, ಅವನ ಕೊರಳಿಂಪಿಗಿಂತ ನನ್ನ ಮತ್ಸ್ಯಪ್ರಿಯತೆಯೂ ಕಾರಣವಿರಬೇಕು.